# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀ ಮಜ್ಜಿಗೆ ರಾಜಶೇಖರ್ ತಂದೆ ದಿ॥ ಮಜ್ಜಿಗೆ ಮಲ್ಲಪ್ಪ | ಕಂದಾಯ ನಿರೀಕ್ಷಕರು ಮೋಕಾ |

**ವಿಷಯ:**–ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಬೈರದೇವನಹಳ್ಳಿ ಗ್ರಾಮದ ಸರ್ವೆ ನಂ:79/ಬಿ/ಎ ವಿಸ್ತೀರ್ಣ:0.66 ಎಕರೆ ಸೇಂಟ್ಸ್ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

*******

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಬೈರದೇವನಹಳ್ಳಿ ಗ್ರಾಮದ ಸರ್ವೆ ನಂ:79/ಬಿ/ಎ ವಿಸ್ತೀರ್ಣ:0.66 ಎಕರೆ ಜಮೀನಿನ ಹಾಲಿ ಭೂಮಾಲಿಕಾರದ ಶ್ರೀಮತಿ ಮುತ್ತಮ್ಮ ಗಂಡ ಮಲ್ಲೇಶಿ ಇವರು ಉಪನೊಂದಾಣೆ ಅಧಿಕಾರಿಗಳು ಬಳ್ಳಾರಿ ಇವರ BLY-1-102235/ 2015-16 ದಿನಾಂಕ:25–05–2015ರಂತೆ ಶ್ರೀ ಮಜ್ಜಿಗೆ ರಾಜಶೇಖರ್ ತಂದೆ ದಿ॥ ಮಜ್ಜಿಗೆ ಮಲ್ಲಪ್ಪ ಇವರಿಗೆ ಪಾಲು ವಿಭಾಗ ಪತ್ರದಂತೆ ಹಕ್ಕುಬದಲಾವಣೆ ಮಾಡಿಕೊಡಲಾಗಿರುತ್ತದೆ. ಅದರಂತೆ ಅರ್ಜಿದಾರರು ಹಕ್ಕುಬದಲಾವಣೆಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಂತೆ ಕಂದಾಯ ನಿರೀಕ್ಷಕರು ಮೋಕಾ ಇವರು ಗ್ರಾಮದಲ್ಲಿ ನಮೂನೆ–21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಆದರೆ ಸದ್ರಿ ಜಮೀನು ಇನಾಂ ಜಮೀನುಯಾಗಿದ್ದು ಕುಟುಂಬಕ್ಕೆ ಸಂಬಂಧಪಡದ ವ್ಯಕ್ತಿಯಿಂದ ಪಾಲು ವಿಭಾಗ ಪತ್ರ ಬರೆಯಿಸಿಕೊಂಡಿರುತ್ತಾರೆಂದು ಕಂದಾಯ ನಿರೀಕ್ಷಕರು ಮೋಕಾ ಇವರು ಸದ್ರಿ ಪಾಲು ವಿಭಾಗ ಕಡತವನ್ನು ಪರಿಶೀಲಿಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಸದ್ರಿ ವಿಷಯದ ಬಗ್ಗೆ ಕಂದಾಯ ನಿರೀಕ್ಷಕರು, ಮೋಕಾ ಇವರಿಗೆ ಮರು ಪರಿಶೀಲನ ವರದಿ ನೀಡಲು ಸೂಚಿಸಲಾಗಿ ಇವರು ದಿನಾಂಕ:12–05–2016ರಂದು ಮರು ಪರಿಶೀಲಿಸಿ ಸದ್ರಿ ಜಮೀನು ಹಾಲಿ ಪಟ್ಟಾದಾರರಿಗೆ ಇವರ ತಂದೆ ಶ್ರೀ ಸಣ್ಣ ಮಲ್ಲಯ್ಯ ಇವರು ದಾನ ಪತ್ರದ ಮೂಲಕ ಬಂದಿದ್ದು ತದನಂತರ ತಮ್ಮ ದೊಡ್ಡಪ್ಪ ಶ್ರೀ ತಿಪ್ಪಯ್ಯ ಇವರ ಮಾಮ್ಮಗ ರಾಜಶೇಖರ ತಂದೆ ಮಜ್ಜಿಗೆ ಮಲ್ಲಯ್ಯ ಇವರರಿಗೆ ಪಾಲು ವಿಭಾಗ ಪತ್ರ ಬರೆದಕೊಟ್ಟಿರುತ್ತಾರೆ. ಸದ್ರಿಯವರು ರಕ್ತ ಸಂಬಂಧಿಗಳಾಗಿರುವುದರಿಂದ ಯಾರಿಂದಲು ಆಕ್ಷೇಪಣೆ ಇರುವುದಿಲ್ಲವೆಂದು ಕಂದಾಯ ಪರಿವೀಕ್ಷಕರು, ಮೋಕಾ ವರದಿಯ ಆಧಾರದ ಮೇರೆಗೆ ಈ ಪ್ರಕರಣವನ್ನು ಇತ್ಯರ್ಥ ಪಡಿಸಲು: 21–03–2016, 04–04–2016 ಮತ್ತು 16–05–2016ರಂದು ವಿಚಾರಣೆ ನಡೆಸಲಾಗಿ ಅರ್ಜಿದಾರರು ಪ್ರಕರಣಕ್ಕೆ ಹಾಜರಾಗಿರುತ್ತಾರೆ ಸದರಿ ಪಾಲು ವಿಭಾಗ ಕಡತವನ್ನು ಪರಿಶೀಲಿಸಲಾಗಿ ಶ್ರೀಮತಿ ಮುತ್ತಮ ಗಂಡ ಮಲ್ಲೇಶಿ ಇವರಿಗೆ ಪ್ರಿತ್ರಾರ್ಜಿತವಾಗಿ ಬಂದ ಆಸ್ತಿಯಾಗಿದ್ದು ಇವರ ದೊಡ್ಡಪ್ಪ ತಿಪ್ಪಯ್ಯನ ಮೊಮ್ಮಗ ಶ್ರೀ ಮಜ್ಜಿಗೆ ರಾಜಶೇಖರ್ ತಂದೆ ದಿ॥ ಮಜ್ಜಿಗೆ ಮಲ್ಲಪ್ಪಯಾಗಿರುವುದರಿಂದ ಈ ಕೆಳಗಿನಂತೆ ಆದೇಶ.

**–::ಆದೇಶ::–**

**ಸಂ/ಕಂ/ವಿವಾದ/ 12 2016–17** — **ದಿನಾಂಕ: 16/ 5/2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಬೈರದೇವನಹಳ್ಳಿ ಗ್ರಾಮದ ಸರ್ವೆ ನಂ:79/ಬಿ/ಎ ವಿಸ್ತೀರ್ಣ:0.66 ಎಕರೆ ಸೇಂಟ್ಸ್ ಜಮೀನನ್ನು ಉಪನೊಂದಾಣೆ ಅಧಿಕಾರಿಗಳು ಬಳ್ಳಾರಿ ಇವರ BLY-1-102235/ 2015-16 ದಿನಾಂಕ:25–05–2015ರಂತೆ ಶ್ರೀ ಮಜ್ಜಿಗೆ ರಾಜಶೇಖರ್ ತಂದೆ ದಿ॥ ಮಜ್ಜಿಗೆ ಮಲ್ಲಪ್ಪ ಇವರ ಹೆಸರಿಗೆ ಪಾಲು ವಿಭಾಗ ಪತ್ರದಂತೆ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 16/05/16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ತಹಶೀಲ್ದಾರರು, ಬಳ್ಳಾರಿ
Tasildar, Bellary

**ಪ್ರತಿಯನ್ನು:**

1.ವಾದಿಗಳು
2.ಶಿರಸ್ತೇದಾರರು ಭೂಮಿ ಗಣಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.
3.ಆದೇಶದ ಕಡತಕ್ಕೆ.

15/7/16
ಜಾರಿಗೊಳಿಸಲಾಗಿದೆ.